**ಕರ್ನಾಟಕ ಲೋಕಾಯುಕ್ತ**

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1056/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ–18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 27/09/2021
1/10

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

ವಿಷಯ: ಶ್ರೀ ವಿ.ಕೆ. ನಾಯಕರ್ ಅಲಿಯಾಸ್ ಕೃಷ್ಣ ನಾಯಕ ತಂದೆ ವಿಶ್ವನಾಥ ಬಿ. ಜಿಲ್ಲಾ ಸಂಪರ್ಕ ಅಧಿಕಾರಿ, ಎಂ.ಎಸ್.ಐ.ಎಲ್. ರ್‍ಆಯಚೂರು, ಹಾಲಿ ಕರ್ತವ್ಯದ ಸ್ಥಳ: ಎಂ.ಎಸ್.ಐ.ಎಲ್. ಆಫೀಸ್, ಚಿತ್ರದುರ್ಗ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

ರಾಯಚೂರು ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ವಿ.ಕೆ. ನಾಯಕರ್ ಅಲಿಯಾಸ್ ಕೃಷ್ಣಾನಾಯಕ ತಂದೆ ವಿಶ್ವನಾಥ ಬಿ., ಜಿಲ್ಲಾ ಸಂಪರ್ಕ ಅಧಿಕಾರಿ, ಎಂ.ಎಸ್.ಐ.ಎಲ್. ರಾಯಚೂರು, ಹಾಲಿ ಕರ್ತವ್ಯದ ಸ್ಥಳ: ಎಂ.ಎಸ್.ಐ.ಎಲ್. ಆಫೀಸ್, ಚಿತ್ರದುರ್ಗ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ ಗಂಗಪ್ಪ ತಂದೆ ಈರಪ್ಪ, ಶ್ರೀ ವೆಂಕಟೇಶ್ವರ ರೋಡ್ ಲೈನ್ಸ್ ಮಾಲೀಕ, ಸಾ: ಜಾಗೀರ ವೆಂಕಟಾಪುರ, ತಾ: ಜಿ: ರಾಯಚೂರು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ). ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿರುತ್ತಾರೆಂದು ವರದಿ ಸಲ್ಲಿಸಿದ ವರದಿಯ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2)ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2) ಪ್ರಕರಣದ ಸಂಕ್ಷಿಪ್ತ ಮಾಹಿತಿ :-

i) ಶ್ರೀ ಗಂಗಪ್ಪ ತಂದೆ ಈರಪ್ಪ, ಶ್ರೀ ವೆಂಕಟೇಶ್ವರ ರೋಡ್ ಲೈನ್ಸ್ ಮಾಲೀಕ, ಸಾ: ಜಾಗೀರ ವೆಂಕಟಾಪುರ, ತಾ: ಜಿ: ರಾಯಚೂರು (ಇನ್ನು ಮುಂದೆ ದೂರುದಾರರೆಂದು ಉಲ್ಲೇಖಿಸಲಾಗುವುದು) ಇವರು ಕಳೆದ ಮೂರು ವರ್ಷಗಳಿಂದ ರಾಯಚೂರು ತಾಲ್ಲೂಕು, ಮಾನ್ವಿ ತಾಲ್ಲೂಕು ಹಾಗೂ ದೇವದುರ್ಗ ತಾಲ್ಲೂಕುಗಳಿಗೆ ರಾಯಚೂರಿನ ಕೆ.ಎಸ್.ಬಿ.ಸಿ.ಎಲ್.ನಿಂದ ಎಲ್ಲಾ ಎಂ.ಎಸ್.ಐ.ಎಲ್. ಔಟ್‌ಲೆಟ್‌ಗಳಿಗೆ ತನ್ನ ವಾಹನಗಳಾದ (1) ಟಾಟಾ ಎ.ಸಿ. ಕೆ.ಎ–45–ಬಿ–4917 (2) ಕೆ.ಎ.–36–ಎ–8617 ಗಳಿಂದ ಮದ್ಯದ ಬಾಕ್ಸ್‌ಗಳನ್ನು ಸರಬರಾಜು ಮಾಡುವ ಬಗ್ಗೆ ದೂರುದಾರರಿಗೆ ಎಂ.ಎಸ್. ಐ.ಎಲ್.ನಿಂದ ಒಪ್ಪಂದವಾಗಿದ್ದರಿಂದ ದೂರುದಾರರು ಸರಬರಾಜು ಮಾಡುವ ವಾಹನಗಳ ಬಾಡಿಗೆ ಹಾಗೂ ಹಮಾಲಿ ಹಣವನ್ನು ನೇರವಾಗಿ ಎಂ.ಎಸ್. ಐ.ಎಲ್. ನಿಗಮದವರು ದೂರುದಾರರ ಎಸ್. ಬಿ.ಐ. ಕಲ್ಮಲ್ ಶಾಖೆಗೆ ಸಂದಾಯ ಮಾಡುತ್ತಿದ್ದು ಆದರೆ ಶ್ರೀ ವಿ.ಕೆ. ನಾಯಕರ್ ಅಲಿಯಾಸ್ ಕೃಷ್ಣಾನಾಯಕ ತಂದೆ ವಿಶ್ವನಾಥ ಬಿ. ಜಿಲ್ಲಾ ಸಂಪರ್ಕ ಅಧಿಕಾರಿ, ಎಂ.ಎಸ್.ಐ.ಎಲ್. ರಾಯಚೂರು (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರು ದೂರುದಾರರಿಗೆ ವಾಹನಗಳ ಬಾಡಿಗೆ ಮೊತ್ತವನ್ನು ಮಂಜೂರು ಮಾಡಲು ಪ್ರತಿ ತಿಂಗಳು 15,000/– ರೂ.ಗಳನ್ನು ಲಂಚವಾಗಿ ನೀಡಬೇಕೆಂದು ಬೇಡಿಕೆ ಇಟ್ಟಿದ್ದರಿಂದ ದೂರುದಾರರು ದಿನಾಂಕ 04/04/2018 ರಂದು ಎದುರುದಾರರನ್ನು ಭೇಟಿಯಾಗಿ "ನಾನು ಬಡವನಿದ್ದೇನೆ, ನನ್ನಿಂದ ಹಣ ಕೊಡುವುದು ಆಗುವುದಿಲ್ಲ" ಅಂತ ಹೇಳಿದ್ದಕ್ಕೆ ಎದುರುದಾರರು "ನಾನು ಹೇಳಿದಷ್ಟು ಹಣ ಕೊಡದೇ ಹೋದರೆ ಬೇರೆಯವರಿಗೆ ಮದ್ಯ ಸರಬರಾಜು ಮಾಡಲು ವಾಹನಗಳನ್ನು ಬಾಡಿಗೆಗಾಗಿ ಪರವಾನಿಗೆ ನೀಡುತ್ತೇನೆ" ಅಂತ ಮಾತನಾಡಿದ್ದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಮಾನ್ವಿ, ದೇವದುರ್ಗ ಹಾಗೂ ರಾಯಚೂರಿನ ಒಟ್ಟು 14 ಔಟ್‌ಲೆಟ್‌ಗಳಲ್ಲಿರುವ 8 ಅಂಗಡಿಗಳಿಗೆ ಮಾಲು ಸಾಗಿಸಲು ಅಪ್ರೂವಲ್ ಕೊಟ್ಟಿರುತ್ತಾರೆ. ಉಳಿದ 6 ಅಂಗಡಿಗಳಿಗೂ ಸಹ ಎದುರುದಾರರು ಹೇಳಿದಂತೆ ದೂರುದಾರರು ಮದ್ಯದ ಬಾಕ್ಸ್‌ಗಳನ್ನು ಹಾಕಿರುತ್ತಾರೆ.

ಆದರೆ 6 ಅಂಗಡಿಗಳ ಬಿಲ್ ಬಗ್ಗೆ ಕೇಳಿದಾಗ ಎದುರುದಾರರು ಮುಂದಿನ ವಾರ ಮಾಡುತ್ತೇನೆಂದು ಹೇಳಿ ಅದಕ್ಕೆ ಬೇರೆಯಾಗಿ ರೂ. 50,000/- ಗಳನ್ನು ನೀಡಬೇಕೆಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಸದ್ಯ 15,000/- ರೂ.ಗಳನ್ನು ಲಂಚವಾಗಿ ಕೊಡಲು ಒತ್ತಾಯಿಸಿರುತ್ತಾರೆ.

ii) ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 05/04/2018 ರಂದು ಮಧ್ಯಾಹ್ನ 12-00 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ರಾಯಚೂರು ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರನ್ನು ಮತ್ತು ಆಡಿಯೋ ರೆಕಾರ್ಡ್ ಮಾಡಿದ ಚಿಪ್‌ನ್ನು ನೀಡಿದ್ದು, ದೂರಿನನ್ವಯ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 04/2018 ರಂತೆ ಪಿ.ಸಿ. ಕಾಯಿದೆ ಕಲಂ 7 ರಂತೆ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

iii) ನಂತರ ದಿ: 05/04/2018 ರಂದು ತನಿಖಾಧಿಕಾರಿಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ದೂರುದಾರರಿಗೆ ಸಂಭಾಷಣೆ ದಾಖಲಿಸಿಕೊಂಡ ಮೊಬೈಲನ್ನು ಹಾಜರ್‌ಪಡಿಸಲು ತಿಳಿಸಿದಂತೆ ದೂರುದಾರರು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರ ಮೊಬೈಲ್‌ನಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್‌ಟಾಪ್‌ಗೆ ವರ್ಗಾವಣೆ ಮಾಡಿ ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ ಎರಡು ಸಿ.ಡಿ.ಗಳನ್ನು ಮಾಡಿ ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ಆ ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಠಾಣೆಯಿಂದ ಒದಗಿಸಿದ ಸೋನಿ ಕಂಪನಿಯ ವಾಯ್ಸ್ ರೆಕಾರ್ಡರನ್ನು ನೀಡಿ ಎದುರುದಾರರಿಗೆ ಹಣ ಕೊಡುವ ಕಾಲಕ್ಕೆ ರೆಕಾರ್ಡಿಂಗ್ ಮಾಡಲು ತಿಳಿಸಿರುತ್ತಾರೆ.

iv) ನಂತರ ದಿನಾಂಕ 05/04/2018 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳು ಸಾಕ್ಷಿ ಹಾಗೂ ಸಹ ಪಂಚರ ಸಮಕ್ಷಮ ನಿರ್ವಹಿಸಿದ ನಂತರ ತನಿಖಾಧಿಕಾರಿಗಳು ದೂರುದಾರರು, ಪಂಚಸಾಕ್ಷಿಗಳು ಹಾಗೂ ಸಿಬ್ಬಂಧಿಯವರೊಂದಿಗೆ ಎದುರುದಾರರು ಕಾರ್ಯ ನಿರ್ವಹಿಸುವ ಕಚೇರಿಗೆ ಹೋಗುವದಕ್ಕಿಂತ ಪೂರ್ವದಲ್ಲಿ ತನಿಖಾಧಿಕಾರಿಯವರು ದೂರುದಾರರ ಕಡೆಯಿಂದ ಎದುರುದಾರರ ಮೊಬೈಲಿಗೆ ಕರೆ ಮಾಡಿ ಮಾತನಾಡಿಸಿದಾಗ ಎದುರುದಾರರು ದೂರುದಾರರಿಗೆ

"ರೂಮಿನಲ್ಲಿದ್ದೇನೆ ಬಾ" ಅಂತ ತಿಳಿಸಿದ್ದರಿಂದ ಎಲ್ಲರೂ ಠಾಣೆಯಿಂದ ಹೊರಟು ರಾಯಚೂರಿನ ಡ್ಯಾಡಿ ಕಾಲೋನಿಯಲ್ಲಿರುವ ಎದುರುದಾರರ ರೂಮಿನ ಹತ್ತಿರ ಬಂದಾಗ ತನಿಖಾಧಿಕಾರಿಗಳು ದೂರುದಾರರು ಮತ್ತು ನೆರಳು ಸಾಕ್ಷಿ ಮಾಳಪ್ಪರವರವರಿಗೆ ರೂಮಿಗೆ ಹೋಗಲು ಸೂಚಿಸಿದಾಗ ದೂರುದಾರರು ಮತ್ತು ನೆರಳು ಸಾಕ್ಷಿರವರು ರೂಮಿನ ಹತ್ತಿರ ಹೋದಾಗ ರೂಮಿನ ಬಾಗಿಲು ಮುಚ್ಚಿದ್ದರಿಂದ ಹಾಗಾಗಿ ದೂರುದಾರರು ಬಾಗಿಲನ್ನು ತಟ್ಟಿದಾಗ ಎದುರುದಾರರು ಬಾಗಿಲನ್ನು ತೆಗೆದು ದೂರುದಾರರನ್ನು ಒಳಗೆ ಕರೆದು "ಹಣ ತಂದಿದ್ದೀರಾ" ಅಂತ ಕೇಳಿರುತ್ತಾರೆ. ದೂರುದಾರರು "ತಂದಿದ್ದೀನಿ" ಅಂತ ಹೇಳಿ ಪಿನಾಪ್ತಲಿನ್ ಪುಡಿ ಲೇಪಿತ ಲಂಚದ ಹಣವನ್ನು ನೀಡಿದಾಗ ಎದುರುದಾರರು ಹಣವನ್ನು ಪಡೆದು ಒಳಗಡೆ ಹೋಗಿ ಗೋಡೆಯ ಮೊಳೆಗೆ ಇದ್ದ ಪ್ಯಾಂಟ್ ಜೇಬಿನಲ್ಲಿ ಇಟ್ಟಿರುತ್ತಾರೆ. ಆಗ ದೂರುದಾರರು ರೂಮಿನಿಂದ ಹೊರಗಡೆ ಬಂದು ತನ್ನ ಕೈಯಿಂದ ತಲೆಯ ಕೂದಲನ್ನು ಸವರಿಕೊಳ್ಳುವುದರ ಮೂಲಕ ಅವರಿಗೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಯಂತೆ ನಿಗದಿತ ಸಿಗ್ನಲ್‌ನ್ನು ನೀಡಿರುತ್ತಾರೆ. ತನಿಖಾಧಿಕಾರಿಗಳು ಅಲ್ಲಿಗೆ ಬಂದು ಸದರಿ ಲಂಚದ ಹಣ ರೂ. 15,000/- ಗಳನ್ನು ತನಿಖಾಧಿಕಾರಿಯವರು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ.

v) ಎದುರುದಾರರನ್ನು ಅದೇ ಕಾರಣಕ್ಕಾಗಿ ತನಿಖಾಧಿಕಾರಿಯವರು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎದುರುದಾರರ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರ ಪ್ಯಾಂಟನ್ನು ಪಡೆದು ಲಂಚದ ಹಣವನ್ನು ಇಟ್ಟುಕೊಂಡಿದ್ದ ಪ್ಯಾಂಟಿನ ಬಲಭಾಗದ ಸೈಡ್ ಜೇಬಿಗೆ ಮಾರ್ಕ್ ಮಾಡಿ ಪ್ಯಾಂಟನ್ನು ಹಾಗೂ ದ್ರಾವಣಗಳನ್ನು ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ನೆರಳು ಸಾಕ್ಷಿಗೆ ಘಟನೆ ಬಗ್ಗೆ ಕೇಳಿದಾಗ ತಾನು ಹೊರಗಡೆ ಕಿಟಕಿ ಹತ್ತಿರ ನಿಂತುಕೊಂಡಿದ್ದು ಅವರು ಮಾತನಾಡಿದ ಎಲ್ಲಾ ಮಾತುಗಳನ್ನು

ಕೇಳಿಸಿಕೊಂಡಿರುತ್ತೇನೆ ಎಂದು ಹೇಳಿರುತ್ತಾರೆ. ಎದುರುದಾರರನ್ನು ಭೇಟಿ ಮಾಡಿದ ವೇಳೆಯಲ್ಲಿ ಎದುರುದಾರರೊಂದಿಗೆ ನಡೆಸುವ ಸಂಭಾಷಣೆಯನ್ನು ರೆಕಾರ್ಡಿಂಗ್ ಮಾಡಲು ತಿಳಿಸಿದ್ದ ವಾಯ್ಸ್ ರೆಕಾರ್ಡ್‌ರನ್ನು ಹಾಜರುಪಡಿಸುವಂತೆ ದೂರುದಾರರಿಗೆ ಹೇಳಿದಾಗ ವಾಯ್ಸ್ ರೆಕಾರ್ಡರನ್ನು ಹಾಜರುಪಡಿಸಿರುತ್ತಾರೆ. ಅದನ್ನು ತನಿಖಾಧಿಕಾರಿಗಳು ಲ್ಯಾಪ್‌ಟಾಪ್‌ಗೆ ಕನೆಕ್ಟ್ ಮಾಡಿ ಆಡಿಯೋ ಫೈಲನ್ನು ಪ್ಲೇ ಮಾಡಿ ಪಂಚರಿಗೆ ಕೇಳಿಸಿ ಆಡಿಯೋ ಫೈಲನ್ನು ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

vi) ತನಿಖಾಧಿಕಾರಿಗಳು ಎದುರುದಾರರಿಗೆ ಸ್ವರಕ್ಷಣಾತ್ಮಕ ಹೇಳಿಕೆ ಬರೆದುಕೊಡಲು ಹೇಳಿದಾಗ ಅವರು "ಈ ದಿನ ಮಧ್ಯಾಹ್ನ ನಾನು ರೂಮಿಗೆ ಬಂದಾಗ ಟ್ರಾನ್ಸ್‌ಪೋರ್ಟರ್ ಆದ ಗಂಗಪ್ಪ ಇವರು ಬಂದು ಸಾಲದ ರೂಪದಲ್ಲಿ ಹಣವನ್ನು ನೀಡಲು ಬಂದಿದ್ದು ಅದನ್ನು ನಾನು ನಿರಾಕರಿಸಿದಾಗ ಅವನು ಕೈಯಲ್ಲಿ ಕೊಟ್ಟು ಹೋಗಿದ್ದು, ನಾನು ತೆಗೆದುಕೊಂಡು ಹೋಗಲು ತಿಳಿಸಿದೆ. ಅವನು ಹೊರಗೆ ಹೋಗಿ ಅವನಲ್ಲಿದ್ದ ಹಣವನ್ನು ನನ್ನ ಜೇಬಿನಲ್ಲಿಟ್ಟಿರುತ್ತಾನೆ. ಅದನ್ನು ನಾನು ಸ್ವೀಕರಿಸಿರುವುದಿಲ್ಲ. ಅವನು ಅಲ್ಲಿ ಬಿಟ್ಟು ಹೋಗಿದ್ದು ನಾನು ಅದನ್ನು ತೆಗೆದುಕೊಂಡಿರುವುದಿಲ್ಲವೆಂದು ತಮ್ಮ ಸಮಜಾಯಿಷಿಯಲ್ಲಿ ತಿಳಿಸಿದ್ದನ್ನು ತನಿಖಾಧಿಕಾರಿಗಳು ದೂರುದಾರರಿಗೆ ಮತ್ತು ನೆರಳು ಸಾಕ್ಷಿದಾರರಿಗೆ ತೋರಿಸಿ ವಿಚಾರಿಸಿದಾಗ ಅವರು ಹಣವನ್ನು ದೂರುದಾರರಿಂದ ಪಡೆದು ಒಳಗಡೆ ಹೋಗಿ ಗೋಡೆಯ ಮೊಳೆಗೆ ಇದ್ದ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ" ಎಂದು ನೀಡಿದ ಸಮಜಾಯಿಷಿಯನ್ನು ಅಲ್ಲಗಳೆದಿರುತ್ತಾರೆ. ಹೀಗಾಗಿ ಸಮಜಾಯಿಷಿಯನ್ನು ಒಪ್ಪಲು ಬರಲಾರದು.

vii) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

viii) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

3) ನಂತರ ಎದುರುದಾರರಿಂದ ಸದರಿ ಆರೋಪಗಳಿಗೆ ಸಂಬಂಧಿಸಿದಂತೆ, ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ ಅವರಿಂದ ಆಕ್ಷೇಪಣೆಗಳನ್ನು ಕೇಳಲಾಯಿತು. ಎದುರುದಾರರು ಸದರಿ ಆಪಾದನೆಗಳನ್ನು ನಿರಾಕರಿಸಿ ತಮ್ಮ ಆಕ್ಷೇಪಣೆಗಳನ್ನು ದಿನಾಂಕ 30/07/2021 ರಂದು ಸಲ್ಲಿಸಿರುತ್ತಾರೆ. ಅದರಲ್ಲಿ ತಾನು ಕೆಲಸದಿಂದ ವಯೋ ನಿವೃತ್ತಿ ಹೊಂದಿರುತ್ತೇನೆಂದು ಸಹ ತಿಳಿಸಿರುತ್ತಾರೆ. ಸದರಿ ಆಕ್ಷೇಪಣೆಯನ್ನು ಪರಿಶೀಲಿಸಲಾಗಿ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ತನಿಖಾಧಿಕಾರಿಗಳ ವರದಿ ಮತ್ತು ಅದರೊಂದಿಗಿನ ದಾಖಲೆಗಳು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಪರಿಗಣಿಸಿದಾಗ, ಎದುರುದಾರರ ಆಕ್ಷೇಪಣೆಗಳನ್ನು ಒಪ್ಪಲು ಈ ಹಂತದಲ್ಲಿ ಸಾಧ್ಯವಿರುವುದಿಲ್ಲ.

4) ಆದ್ದರಿಂದ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳು, ನೀಡಿರುವ ಮಾಹಿತಿಗಳು, ಇತ್ಯಾದಿಗಳಿಂದ ಎದುರುದಾರರು ದೂರುದಾರರ ವಾಹನಗಳ ಬಾಡಿಗೆ ಮೊತ್ತವನ್ನು ಮಂಜೂರು ಮಾಡಲು ಪ್ರತಿ ತಿಂಗಳು ರೂ. 15,000/- ಗಳ ಲಂಚದ ಹಣವನ್ನು ನೀಡಲು ಹಾಗೂ ದೂರುದಾರರಿಗೆ ಮಾನ್ವಿ, ದೇವದುರ್ಗ ಹಾಗೂ ರಾಯಚೂರು ತಾಲ್ಲೂಕುಗಳ ಒಟ್ಟು 14 ಔಟ್‌ಲೆಟ್‌ಗಳಲ್ಲಿರುವ 8 ಅಂಗಡಿಗಳಿಗೆ ಮಾಲು ಸಾಗಿಸಲು ಅಪ್ರೂವಲ್ ಕೊಟ್ಟಿದ್ದು, ಉಳಿದ 6 ಅಂಗಡಿಗಳಿಗೂ ಸಹಿತ ಎದುರುದಾರರೇ ಹಾಕಲು ಹೇಳಿದಂತೆ ದೂರುದಾರರು ಹಾಕುತ್ತಿದ್ದು ನಂತರ ಬಿಲ್ ಬಂದಿಲ್ಲವೆಂದು ಎದುರುದಾರರನ್ನು ಕೇಳಿದಾಗ ಆ ಬಿಲ್ ಬಗ್ಗೆ ಮುಂದಿನ ವಾರ ಮಾತನಾಡುತ್ತೇನೆ ಎಂದು ಹೇಳಿ ಅದಕ್ಕೆ ರೂ. 50,000/- ಗಳನ್ನು ಬೇರೆಯಾಗಿ ನೀಡಬೇಕೆಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಸದ್ಯ ರೂ. 15,000/- ಗಳ ಲಂಚವನ್ನು ನೀಡುವಂತೆ ಒತ್ತಾಯಿಸಿ ದಿ: 05/04/2018 ರಂದು ದೂರುದಾರರಿಂದ ಸ್ವೀಕರಿಸುವ ಮೂಲಕ ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ

(iii) ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದುದರಿಮದ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 ರ ಕಲಂ 12(3) ಅಡಿಯಲ್ಲಿ ಎದುರುದಾರರಾದ ಶ್ರೀ ವಿ.ಕೆ. ನಾಯಕರ್ ಅಲಿಯಾಸ್ ಕೃಷ್ಣಾನಾಯಕ ತಂದೆ ವಿಶ್ವನಾಥ ಬಿ. ಜಿಲ್ಲಾ ಸಂಪರ್ಕ ಅಧಿಕಾರಿ, ಎಂ.ಎಸ್.ಐ.ಎಲ್. ರಾಯಚೂರು ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

5) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

1/10/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.